Doc. 274 T-P-2

(1)

R No KRNN 12 24-4-74



ರಾಜ್ಯದಲ್ಲಿ ಪ್ರಥಮ ಸ್ವರ್ಣ ಮಹೋತ್ಸವ ನೆರವೇರಿಸಿದ ಪತ್ರಿಕೆ

First Golden Jubilee Celebrated Paper in The State

** Now in 57 th Year **

'Satyavadi' daily, Mysore 4

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬಣ್ಣಾವ್ ಸಂಪಾದಕರು: ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ (3 ಪೈಸೆ

ನಕಾರಕೆ ಯುವಕ ಕಾಂಗೆಸ್‌ನ ಎಚೆರಿಕೆ

ರ ಲಿ

ನೀರಿನ ತಾಪತ್ರಯ

ಮೈಸೂರು— ಮಳೆ ಇಲ್ಲದೆ ಕೃಷ್ಣರಾಜಸಾಗರದಲ್ಲಿ ನೀರಿನ ಮಟ್ಟ ತಗ್ಗಿದ್ದು ನಗರಕ್ಕೆ ನೀರು ಸರಬರಾಜು ಕಷ್ಟವಾಗಿರುವದರಿಂದ ಬೆಳಿಗ್ಗೆ 4-30 ಗಂಟೆಯಿಂದ 10 ಗಂಟೆವರೆಗೆ ಮಾತ್ರ ನೀರು ಬಿಡಲಾಗುವುದೆಂದು ಮುದಿಸಿಪಲ್ ಪೈಪ್ ನೋಟೂ ತಿಳಿಸುತ್ತದೆ.

ಉತ್ತರ ಪುಸ್ತಕ ಪರಿಶೀಲಿಸುವವರಿಗೆ ಭತ್ಯ

ಬೆಂಗಳೂರು— ಪರೀಕ್ಷಾ ಉತ್ತರ ಪುಸ್ತಕಗಳನ್ನು ಪರಿಶೀಲಿಸುವ ಉಪಾಧ್ಯಾಯರ ದಿನಭತ್ಯವನ್ನು ರೂ. 10 ಕ್ಕೆ ಹೆಚ್ಚಿಸುವ ವಿಷಯವನ್ನು ಇಂದು ಪರಿಶೀಲಿಸಲಾಗುವುದೆಂದು ಶಾಸನಸಭೆಯಲ್ಲಿ ಮುಖ್ಯ ಮಂತ್ರಿ ಶ್ರೀ ದೇವರಾಜ ಅರಸ್ ರವರು ತಿಳಿಸಿದರು.

★ ಕನ್ನಡ ಟೈಪ್‌ರೈಟರು ತಯಾರಕರಿಗೆ ಸಹಾಯ ನೀಡುವ ಭರವಸೆಯನ್ನು ಮುಖ್ಯ ಮಂತ್ರಿ ಶ್ರೀ ದೇವರಾಜ ಅರಸ್ ರವರು ಶಾಸನಸಭೆಯಲ್ಲಿ ತಿಳಿಸಿದರು.

ವುಡ್‌ಲಾಂಡ್ 25 4 74 ರಿಂದ

ಅವೋಫ ಆರಂಭ

ಉ ಪಾ ನ ನೆ

ಕನ್ನಡ ಕಲರ್ ಮಹೋನ್ನತ ಚಿತ್ರ ದಿನ 3 ಪ್ರದರ್ಶನಗಳು

ಪಾತ್ರ : ಆರತಿ ಡಾ|| ಮಣ್ಣೂರ್ ಶಿವರಾಂ ಕೆ. ಎಸ್. ಅಶ್ವತ್ಥ್, ಲೀಲಾವತಿ ಮುಂತಾದವರು ದಿಗ್ದರ್ಶನ : ಎಸ್ ಆರ್. ಪುಟ್ಟಣ್ಣ ಕಣಗಾಲ್

25-4-74 ರಿಂದ ಬಾಲ್ಕನಿ ತರಗತಿಗಳಿಗೆ ಮಾತ್ರ ಮುಂಚಿತವಾಗಿ ಟಿಕೆಟ್ ಕೊಡಲಾಗುವುದು ದಿನ ಬೆಳಿಗ್ಗೆ 10-30 ರಿಂದ 11-30 ರ ವರೆಗೆ

ಅ ಪೆ ರಾ 26 4 74 ರಿಂದ

ನಾಗ್ ಮೋರೆ ನಾಥ್

ರೋಮಾಂಚಕಾರಿ ಹಿಂದಿ ವರ್ಣ ಚಿತ್ರ

ದಿನ 3 ಪ್ರದರ್ಶನಗಳು

ಸಾಮೂಹಿಕ ವರ್ಗಾವಣೆ

ಕೋಲಾರ— ನಂಗಳ್ಳಿ ಪೋಲೀಸು ಸ್ಟೇಷನ್ನಿನ ಒಬ್ಬ ಸಬ್‌ಇನ್‌ಸ್ಪೆಕ್ಟರು, ಇಬ್ಬರು ಹೆಡ್‌ಕಾನಸ್ಟೆಬಲರು, 15 ಕಾನಸ್ಟೆಬಲರನ್ನು ಸಾಮೂಹಿಕವಾಗಿ ವರ್ಗಾಯಿಸಲಾಗಿದೆ – ಗಂಗಳ್ಳಿ ಪೋಲೀಸು ಕಾಲನಿಯ ಒಂದು ಭಾವಿಯಲ್ಲಿ, ಭೂಗರ್ಭ ನಿಧಿ ಶೋಧಕ ಆಂಧ್ರದ ರಾಮುದಾಸ್‌ರ ಶವವು ಪತ್ತೆಯಾಗಿದೆ – ಈ ಸ್ಥಾವಿನ ಮತ್ತು ಭೂಗರ್ಭ ನಿಧಿಯ ಬಗ್ಗೆ ತನಿಖೆಯನ್ನು ಸಿಐಡಿ ಕೈಗೊಂಡಿದೆ.

★

ಹಣದ ಅಭಾವ

ನವದೆಹಲಿ— ಕಾಂಗ್ರೆಸ್ ಪಾರ್ಲಿಮೆಂಟರಿ ಪಾರ್ಟಿಯು ಹಣದ ಅಭಾವದಿಂದ ಅದರ ಸಾಧಾರಣ ಖರ್ಚಿನ ವಿಲೇಗೂ ಅಶಕ್ತವಾಗಿದೆ.

★

ಮಾಯವಾಗಿರುವ ದುರ್ಬೀನು

ನವದೆಹಲಿ— ಏಪ್ರಿಲ್ 11 ರಂದು ಬಾಲಸೂರಿನಲ್ಲಿ ಬಲವಾದ ರಕ್ಷಣೆಯಿಂದ ಬಹುದೊಡ್ಡ ದುರ್ಬೀನು ಮಾಯವಾದ ವಿಷಯವು ಲೋಕಸಭೆಯಲ್ಲಿ ಕಳವಳ ಉಂಟುಮಾಡಿದೆ.

★

ಕಾಂಗ್ರೆಸ್ಸಿಗೆ ಜಯ

ಬೆಂಗಳೂರು— ಗುಲ್ಬರ್ಗಾ ಕ್ಷೇತ್ರದ ಪಾರ್ಲಿಮೆಂಟು ಸ್ಥಾನವು ಕಾಂಗ್ರೆಸ್ಸಿಗೆ ಸಿಕ್ಕಿತು.

★

ಸಂಸ್ಕೃತದಲ್ಲಿ ವಾರ್ತಾನಾಹಿನಿ

ಬೆಂಗಳೂರು— ಜೂನ್ 1 ರಿಂದ ಡೆಲ್ಲಿಯ ಆಕಾಶವಾಣಿಯಿಂದ ದಿನ 5 ನಿಮಿಷ ಕಾಲ ಸಂಸ್ಕೃತದಲ್ಲಿ ವಾರ್ತಾ ಪ್ರಸಾರ ಮಾಡುವಂತೆ ವಾರ್ತಾ ಸಚಿವಾಲಯದ ಸಂಸ್ಕೃತ ಕಾರ್ಯಕ್ರಮದ ಸಲಹಾ ಸಮಿತಿ ಶಿಫಾರಸು ಮಾಡಿದೆ

ರೈಲ್ವೇಯವರ ಮುಷ್ಕರದ ನೋಟೀಸು

ನವದೆಹಲಿ— ಯೋಜಿಸಿರುವ ರೈಲ್ವೇ ಮುಷ್ಕರವು ನ್ಯಾಯಬಾಹಿರವೆಂದು ರೈಲ್ವೆ ಮಂತ್ರಿಗಳು ಹೇಳುತ್ತಿರುವಾಗಲೇ, 100 ಕ್ಕೂ ಹೆಚ್ಚು ರೈಲ್ವೇ ನೌಕರರ ಸಂಘಗಳು ಮೇ 8 ರಿಂದ ಮುಷ್ಕರಿಸುವುದಾಗಿ ನೋಟೀಸು ಜಾರಿಮಾಡಿವೆ.

★

ಯುವಕ ಕಾಂಗ್ರೆಸ್ಸಿನ ಬೆದರಿಕೆ

ಮಂಗಳೂರು— ಅಹಾರ ಧಾನ್ಯಗಳ ಅಂತರ ಜಿಲ್ಲಾ ಸಾಗಾಣಿಕೆ ಮೇಲಿನ ಪ್ರತಿಬಂಧಕವನ್ನು ಏಪ್ರಿಲ್ 30 ರೊಳಗೆ ತೆಗೆಯದಿದ್ದರೆ, ಸರಕಾರವನ್ನು ಒತ್ತಾಯ ಮಾಡಲು, ಜಿಲ್ಲಾ ಕಾಂಗ್ರೆಸ್ ಕಚೇರಿಯನ್ನು ಮುತ್ತುವುದಾಗಿ ಯುವಕ ಕಾಂಗ್ರೆಸ್ ಬೆದರಿಕೆ ಹಾಕಿದೆ.

★

ಪ್ರತಿಬಂಧಕಾಜ್ಞೆ ತೆಗೆಯಲಾಯ್ತು

ಮದರಾಸು— ಅಕ್ಕಿ ಬೆಲೆ ಏರಿಕೆ ತಡೆಗಟ್ಟಲು ತಮಿಳುನಾಡು ಸರಕಾರವು ಅಂತರ ಜಿಲ್ಲಾ ಅಕ್ಕಿ ಮತ್ತು ಭತ್ತ ಸಾಗಾಣಿಕೆ ಮೇಲಿನ ಪ್ರತಿಬಂಧಕ ತೆಗೆದುಹಾಕಿತು.

★

ಪೋರ್ಟರುಗಳ ಭಾರ್ಜು ಹೆಚ್ಚಿತು

ಮದರಾಸು— ರೈಲ್ವೆ ಬೋರ್ಡು ಜೀವಿತ ಖರ್ಚು ಹೆಚ್ಚಿರುವದರಿಂದ ಪೋರ್ಟರುಗಳ ಭಾರ್ಜನ್ನು 3 ನೇ 1 ಭಾಗ ಹೆಚ್ಚಿಸಿದೆ.

★

ಅಗ್ನಿ ಅನಾಹುತ

ಷಹಜಾನಪುರ— ನಿಗೋಷ ಗ್ರಾಮದಲ್ಲಾ ಭೀಕರ ಅಗ್ನಿ ಅನಾಹುತದಲ್ಲಿ 3 ಜನ ಜೀವಸಹಿತ ಸುಟ್ಟು ಹೋದರು, ರೂ. 5 ಲಕ್ಷ ಆಸ್ತಿ ನಷ್ಟವಾಯಿತು.

○

ಸರಕಾರದ ಪತ್ರಿಕೆ

ನವದೆಹಲಿ— ಸರಕಾರಕ್ಕೆ ಪತ್ರಿಕೆಯನ್ನು ಹೊರಡಿಸುವ ಇಚ್ಛೆ ಇಲ್ಲವೆಂದು ಈಚೆಗೆ ಲೋಕಸಭೆಯಲ್ಲಿ ತಿಳಿಸಲಾಯಿತು.

★

ಒಳ್ಳೆದಾಯಿತು

ಬೆಂಗಳೂರು— ಮುಖ್ಯ ಮಂತ್ರಿಗಳು ಮತ್ತು ವಿದ್ಯಾಮಂತ್ರಿಗಳು ಇತ್ತ ಭರವಸೆಯನ್ನನುಸರಿಸಿ ವೌಢ್ಯಶಾಲಾ ಉಪಾಧ್ಯಾಯರ ಮುಷ್ಕರ ನಿಂತಿತು – ಬಗ್ಗೆ ಉಪವಾಸ ಕೈಗೊಂಡಿದ್ದ ಶ್ರೀ ಮಳ್ಳೂರು ಅನಂದ ರಾವ್, ಎಂ ಎಲ್ ಸಿ ಯವರು ಉಪವಾಸ ನಿಲ್ಲಿಸಿದರು – ಉಪಾಧ್ಯಾಯರ ಉತ್ತರ ಪುಸ್ತಕಗಳ ಪರಿಶೀಲನೆ ಪ್ರಾರಂಭಿಸಿದರು.

★

ದಾಖಲಾತಿ ಅಕ್ಕಿ ಉತ್ಪಾದನೆ

ರೋಂ — ಕಳೆದ ವರ್ಷ ನಿಶ್ಚಿತ ಅಕ್ಕಿ ಉತ್ಪಾದನೆಯು 320 ಮಿಲಿಯ ಟನ್ನುಗಳಿಗಿಂತಲೂ ಹೆಚ್ಚಾಗಿದ್ದು ದಾಖಲೆ ಸ್ಥಾಪಿಸಿದೆಂತಾಗಿದೆ ಎಂದು ಆಹಾರ ಮತ್ತು ವ್ಯವಸಾಯ ಸಂಸ್ಥೆ ವರದಿ ತಿಳಿಸುತ್ತದೆ.

○

ಪೌರಸಭೆಯವರ ಸಾಂಸ್ಕೃತಿ ಕಾರ್ಯಕ್ರಮ

ಮೈಸೂರು— ಪೌರಸಭೆಯವರು ಸಾರ್ವಜನಿಕರಮನರಂಜನೆಗಾಗಿ 28-4-74 ರಿಂದ 3–11–74 ರವರೆಗೆ ವಿವಿಧ ದಿನಗಳಲ್ಲಿ ವಿವಿಧ ಸ್ಥಳಗಳಲ್ಲಿ ಸಂಜೆ 6 ಗಂಟೆಗೆ ವಿವಿಧ ಕಲಾವಿದರಿಂದ ಸಂಗೀತ ಮತ್ತು ಆರ್ಕೆಸ್ಟ್ರ ಏರ್ಪಡಿಸಲು ಯೋಜಿಸಿರುವರು.

ನಂ. ಕೆಆರ್ ಹೆಚ್/ಸಿಕ್ಕೆ/31/74-75

ಜಾಹಿರಾತು ಹರಾಜು

ನೋಟೀಸ್

8-4-74

ಕೆ ಆರ್ ಆಸ್ಪತ್ರೆಯ ಹಳೇ ಅಂಬ್ಯುಲೆನ್ಸ್ ಕಾರು ನಂ ಎಂವೈಯು 1100 1935 ಫೋರ್ಡ್ ಮಾಡೆಲ್ ಹರಾಜಿನಲ್ಲಿ ಮಾರುವುದಿದೆ ಇಷ್ಟವುಳ್ಳವರು ಆಸ್ಪತ್ರೆಯ ಗ್ಯಾರೇಜಿನಲ್ಲಿ ಅದನ್ನು ನೋಡಬಹುದು ಹರಾಜನ್ನು ಸೋಮವಾರ ತಾ॥ 6 5–1974 ನೇ ದಿನ ಬೆಳಿಗ್ಗೆ 11 ಗಂಟೆಗೆ ಅಂಬ್ಯುಲೆನ್ಸ್ ಇದ್ದ ಸ್ಥಳದಲ್ಲಿಯೆ ಮಾರಲಾಗುವುದು. ಹರಾಜಿನಲ್ಲಿ ಭಾಗವಹಿಸುವವರು ಮೊದಲು ಡೀನರ ಹತ್ತಿರ 1000-00 ರೂ ಗಳನ್ನು ಡಿಪಾಜಿಟ್ ಕಟ್ಟಬೇಕಾಗುವುದು ಹರಾಜಿನ ಇತರ ನಿಯಮಗಳನ್ನು ಆಸ್ಪತ್ರೆಯ ಆಫೀಸಿನಲ್ಲಿ ಪಡೆಯಬಹುದು

ಸೆಕ್ರೆಟರಿ,
ಕೆ ಆರ್ ಆಸ್ಪತ್ರೆ, ಮೈಸೂರು

ಮೈಸೂರು ಪಿ. ಡಬ್ಲ್ಯು. ಡಿ.

ಟೆಂಡರ್‌ಪ್ರಕಟಣೆ

ತಾ॥ 8–4–74

ಈ ಕೆಳಗೆ ಕಂಡ ಕೆಲಸಗಳಿಗಾಗಿ ಮೈಸೂರು ಲೋಕೋಪಯೋಗಿ ಇಲಾಖೆಯಲ್ಲಿ ರಿಜಿಸ್ಟರ್ ಆಗಿರುವ ಕಂಟ್ರಾಕ್ಟರ್‌ಗಳಿಂದ, ಕೆಲಸದ ಹೆಸರು ಬರೆದ ಮೊಹರಾದ ಟೆಂಡರ್‌ಗಳನ್ನು ದ್ವಿಪ್ರತಿಗಳಲ್ಲಿ ವಿಧಾಯಕವಾದ ಫಾರಂನಲ್ಲಿ ಆಹ್ವಾನಿಸಲಾಗಿದೆ ಮತ್ತು ಎಕ್ಸಿಕ್ಯುಟೀವ್ ಇಂಜಿನಿಯರ್‌ರವರು ಅವನ್ನು 9–5–74 ರ ಮಧ್ಯಾಹ್ನ 4 ಗಂಟೆ ವರೆಗೆ ಸ್ವೀಕರಿಸುವರು. ಸಾಧ್ಯವಾದರೆ ಅವನ್ನು ಅದೇ ದಿನ ಒಡೆಯಲಾಗುವುದು. ಕಾಲಂ ನಂ. 7-ರಲ್ಲಿ ನಮೂದಿಸಿರುವ ದರವನ್ನು ಪಾವತಿ ಮಾಡಿದಲ್ಲಿ 7–5–74 ಮತ್ತು 8–5–74 ರಂದು ಕೆಲಸದ ದಿನಗಳಲ್ಲಿ ಕಚೇರಿ ವೇಳೆಗಳಲ್ಲಿ ಖಾಲಿ ಟೆಂಡರ್ ಫಾರಂಗಳನ್ನು ಕೊಡಲಾಗುವುದು— ಮೈಸೂರು–5 ರಲ್ಲಿ ಇರುವ, ಮೈಸೂರು ವಿಭಾಗದ, ಎಕ್ಸಿಕ್ಯುಟೀವ್ ಇಂಜಿನಿಯರ್‌ರವರ ಕಚೇರಿಯಿಂದ ಹೆಚ್ಚಿನ ವಿವರಗಳನ್ನು ಪಡೆಯಬಹುದು.

1	ಸೀ. ನಂ. 1
2	ಕೆಲಸದ ಹೆಸರು	ನಂಜನಗೂಡು ತಾಲ್ಲೂಕಿನಲ್ಲಿರುವ ಚಟ್ನಹಳ್ಳಿ ಮತ್ತು ನಾಡಾಪುರ ಮಧ್ಯೆ ಕಸ್ತೆಯ ಮೇಲೆ ಸೇತುವೆ ನಿರ್ಮಾಣ ಮಾಡುವುದು
3	ಟೆಂಡರ್‌ಗೆ ಇಟ್ಟಿರುವ ಅಂದಾಜು ಮೊತ್ತ – ರೂ. 147800/–
4	ಇ. ಎಂ. ಡಿ – ರೂ. 4195/–
5	ಭದ್ರತಾ ಠೇವಣಿ – ರೂ. 8390/–
6	ಕಾಲಾವಧಿ – 12 ತಿಂಗಳುಗಳು
7	ಎರಡು ಫಾರಂಗಳ ಒಂದು ಸೆಟ್ ಟೆಂಡರ್ ಫಾರಂಗಳ ದರ – ರೂ. 10/–
8	ಕಂಟ್ರಾಕ್ಟರ್ ವರ್ಗ – ಮೂರು ಮತ್ತು ಮೇಲ್ಪಟ್ಟ ವರ್ಗ

ದ್ವಿಪ್ರತಿ ಟೆಂಡರ್‌ಗಳೊಡನೆ ತಮ್ಮ ರಿನ್ಯೂಯಲ್ ರಿಜಿಸ್ಟ್ರೇಷನ್ ಪ್ರತಿಯೊಂದನ್ನು ಕಂಟ್ರಾಕ್ಟರುಗಳು ಹಾಜರುಪಡಿಸಬೇಕು. ಅವರೇನಾದರೂ ಸ್ಥಾಯಿ ಠೇವಣಿ ಪಾವತಿ ಮಾಡಿದ್ದರೆ (2 ನೇ ವರ್ಗ ಮತ್ತು 1 ನೇ ವರ್ಗದ ಕಂಟ್ರಾಕ್ಟರ್‌ಗಳ ಸಂದರ್ಭದಲ್ಲಿ ನೋಡಿ) ಟೆಂಡರ್ ಕಾಲದಲ್ಲಿ ಇ. ಎಂ. ಡಿ ಯನ್ನಾಯಿತಿ ಪ್ರತಿಯನ್ನು ಮತ್ತು ದ್ವಿಪ್ರತಿ ಟೆಂಡರ್‌ನೊಡನೆ ರಿನ್ಯೂಯಲ್ ರಿಜಿಸ್ಟ್ರೇಷನ್ ಪ್ರತಿಯನ್ನು ಲಗತ್ತಿಸಬೇಕು

ಟೆಂಡರ್‌ನ್ನು ಅಂಗೀಕರಿಸಲು ತಕ್ಕ ಅಧಿಕಾರವುಳ್ಳ ಅಧಿಕಾರಿಯವರಿಗೆ ಯಾವುದೇ ಕಾರಣವನ್ನು ಕೊಡದೆ ಟೆಂಡರ್‌ನ್ನು ತಿರಸ್ಕರಿಸುವ ಹಕ್ಕು ಮೀಸಲಾಗಿದೆ.

ಸಹಿ/–

ಎಕ್ಸಿಕ್ಯುಟೀವ್ ಇಂಜಿನಿಯರ್,
ಮೈಸೂರು ವಿಭಾಗ, ಮೈಸೂರು

SHAKTI SUDHA

A Superb Tonic

ಭಾರತದಲ್ಲಿ ಗೋವಧೆ

ಪೂರ್ಣ ನಿಶೇಧವಾಗಲಿ

Contribute Liberally
to the National Defence Fund

Protect the Cow

Help The Gorakshana

— HumanitarianPropoganda Monthly—

Edited Printed and Published by Dharmapracharanirata M S. Krishna Rao (Proprietor) at the Satyawadi Press, Chamarajapuram Mysore